ದಿನಾಂಕ: 31.03..2022ರಂದು ಬೆಳ್ಗೆಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 04.04.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ [ಪ್ರಭಾರ]
2. ಶ್ರೀ ಶಿವರಾಮಯ್ಯ, ಎ.ಎಸ್.ಐ.
3. ಶ್ರೀ ಶಿವರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ಸುಬ್ರಮಣಿ.ಆರ್. ಕಂದಾಯ ಮೌಲ್ಯಮಾಪಕರು
5. ಶ್ರೀ ಅನಿಕೇಶ್, ಹಿರಿಯ ಆರೋಗ್ಯ ಪರಿವೀಕ್ಷರು,
6. ಶ್ರೀಮತಿ ವರಲಕ್ಷ್ಮಿ, ಬೆಸ್ಕಾಂ
7. ಶ್ರೀ ಪ್ರದೀಪ್ ಕುಮಾರ್, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
8. ವೈ.ಜಿ. ವಸಂತ್

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಪಶ್ಚಿಮ ಕಾರ್ಡ್ ರಸ್ತೆ, ಮಂಜುನಾಥನಗರ ಮುಖ್ಯ ರಸ್ತೆ, ತಿಮ್ಮಯ್ಯ ಮುಖ್ಯ ರಸ್ತೆ, ಕೆಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಹೇರಳವಾಗಿದ್ದು, ವಾಹನ ಸವಾರರಿಗೆ ತೊಂದರೆಯಾಗುತ್ತದೆ ಎಂದು ಎಲ್ಲಾ ಸದಸ್ಯರು ಮತ್ತು ನಾಕರರು ಸಭೆಗೆ ತಿಳಿಸಿರುತ್ತಾರೆ. ಅದರಂತೆ ಸದರಿ ಪ್ರದೇಶ ವ್ಯಾಪ್ತಿಗೆ ಒಳಪಡುವ ವಿಜಯನಗರ ಸಂಚಾರಿ ಠಾಣೆಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ವಾರ್ಡ್ ಅಭಿಯಂತರರು ರವರು ಸಂಬಂಧಿಸಿದ ಸಂಚಾರಿ ವಿಜಯನಗರ ಸಂಚಾರಿ ಠಾಣೆಗೆ ಮಾತನಾಡಿ, ತುರ್ತಾಗಿ ಮೇಲೆ ತಿಳಿಸಿರುವ ಪ್ರದೇಶದಲ್ಲಿ ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಕೋರಲಾಗಿದೆ.

2. ನೋಡಲ್ ಅಧಿಕಾರಿಗಳು, ಎಸ್.ಎ.ಎಸ್. ಇದರ ಬಗ್ಗೆ ಕಂದಾಯ ಅಧಿಕಾರಿಗಳ ಜೊತೆ ಚರ್ಚಿಸಿ, ಅದರ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿದರು.

3. ವಾರ್ಡ್ ನಂ. 107ರ ಪ್ರದೇಶ ವ್ಯಾಪ್ತಿಯಲ್ಲಿ 11ನೇ ಮುಖ್ಯ ರಸ್ತೆ ಹಾಗೂ ಇತರೆ ಅಡ್ಡ ರಸ್ತೆಗಳ ಹಾಯ್ದು ಭಾಗಳಲ್ಲಿ ಅನುಪಯುಕ್ತ ವಸ್ತುಗಳು ಸಂಗ್ರಹಗೊಂಡಿರುವುದರಿಂದ ಜನಸಾಮಾನ್ಯರ ಸಂಚಾರಕ್ಕೆ ತೊಂದರೆಯಾಗಿದೆ ಎಂದು ಮರಿಲಕ್ಕಪ್ಪ ರವರು ಸಭೆಗೆ ತಂದಿರುತ್ತಾರೆ. ಈಗಾಗಲೇ ದಿನನಿತ್ಯದಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್ ಕೆಲಸ ನಿರ್ವಹಿಸುತ್ತಿದ್ದು, ಹಂತ ಹಂತವಾಗಿ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸುವ ಕೆಲಸ ಹಂತ ಹಂತವಾಗಿ ನಿರ್ವಹಿಸಲಾಗುತ್ತದೆ ಎಂದು ವಾರ್ಡ್ ಅಭಿಯಂತರರು ಸಭೆಗೆ ಉತ್ತರಿಸಿರುತ್ತಾರೆ.

4. ರಾಜಾಜಿನಗರ ಸಂಚಾರಿ ಠಾಣೆಯ ಎ.ಎಸ್.ಐ. ಶ್ರೀ ಶಿವರಾಮಯ್ಯ ರವರ ಕೋರಿಕೆಯಂತೆ ರಾಜಾಜಿನಗರ ಪೋಲಿಸ್ ಠಾಣೆ ಆವರಣದಲ್ಲಿ ಕೆಲವು ಮರಗಳನ್ನು ಮತ್ತು ಕೊಂಬೆಗಳನ್ನು ಕಟಾಯಿಸಿ ಆಗಬಹುದಾದ ಅನಾಹುತವನು ತಡೆಯಬೇಕೆಂದು ಸಭೆಗೆ ತಿಳಿಸಿರುತ್ತಾರೆ. ಸಭೆಯಲ್ಲಿದ್ದ ಶ್ರೀ ಶಿವರಾಮಯ್ಯ ರವರು ತುರ್ತಾಗಿ ಕ್ರಮ ವಹಿಸಿ, ಮುಂದಿನ ಸಭೆಗೆ ವರದಿಯನ್ನು ತಿಳಿಸಲಾಗುವುದು ಎಂದು ತಿಳಿಸಿರುತ್ತಾರೆ.

ಪು.ತಿ.ನೋ.

Scanned by CamScanner

5. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಭೆಯಲಿದ್ದ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ವಿಳಂಭ ಮಾಡುತ್ತಿರುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಿದರು

6. ವಾರ್ಡ್ ನಂ. 107ರ ಪ್ರದೇಶ ವ್ಯಾಪ್ತಿಯಲ್ಲಿ ಹೇರಳವಾಗಿ ರಸ್ತೆ ಗುಂಡಿ ಬಿದ್ದು, ಜನ ಸಾಮಾನ್ಯರು ನಡೆದಾಡಲು ತೊಂದರೆಯಾಗಿದೆ ಎಂದು ಒಕ್ಕರಲುನಿಂದ ಸಭೆಗೆ ತಿಳಿಸಿರುತ್ತಾರೆ. ಅದಕ್ಕೆ ವಾರ್ಡ್ ಅಭಿಯಂತರರು ಈಗಾಗಲೇ ಕಾಮಗಾರಿಯು ಅನುಮೋದನೆಗೊಂಡು ಟೆಂಡರ್ ಪ್ರೊಸಸ್ ಮುಗಿದು, ಶ್ರೀ ಶಂಕರ್ ಎಂಬುವವರಿಗೆ ಗುತ್ತಿಗೆ ವಹಿಸಿದ್ದು, ಇನು 3-4 ದಿನಗಳಲ್ಲಿ ಕೆಲಸ ಪ್ರಾರಂಭವಾಗುತ್ತದೆ. ಎಂದು ಸಭೆಗೆ ತಿಳಿಸಲಾಯಿತು.

7. ಬೀದಿ ದೀಪಗಳ ಬಗ್ಗೆ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದಾಗ, ಸಂಬಂಧಿಸಿದ ವಾರ್ಡ್ ಅಭಿಯಂತರರುಗಳಿಗೆ ಮಾನ್ಯ ನೋಡಲ್ ಅಧಿಕಾರಿಗಳೆ ದೂರವಾಣಿ ಮುಖಾಂತರ ಚರ್ಚಿಸಿ, ಕೆಲಸವನ್ನು ತುರ್ತಾಗಿ ಬೀದಿ ದೀಪಗಳನ್ನು ನಿರ್ವಹಣೆ ಮಾಡುವಂತೆ ಜಮಿಲ್ ಅಭಿಯಂತರರಿಗೆ ಸೂಚಿಸಲಾಗಿದೆ.

8. ಪಶ್ಚಿಮ ಕಾರ್ಡ್ ರಸ್ತೆ, ಮಂಜುನಾಥನಗರ ಮುಖ್ಯ ರಸ್ತೆ, ತಿಮ್ಮಯ್ಯ ಮುಖ್ಯ ರಸ್ತೆ, ಕೆಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಹೇರಳವಾಗಿದ್ದು, ವಾಹನ ಸವಾರರಿಗೆ ತೊಂದರೆಯಾಗುತ್ತದೆ ಎಂದು ಎಲ್ಲಾ ಸದಸ್ಯರು ಮತ್ತು ನಾಕರರು ಸಭೆಗೆ ತಿಳಿಸಿರುತ್ತಾರೆ. ಅದರಂತೆ ಸದರಿ ಪ್ರದೇಶ ವ್ಯಾಪ್ತಿಗೆ ಒಳಪಡುವ ವಿಜಯನಗರ ಸಂಚಾರಿ ಠಾಣೆಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ವಾರ್ಡ್ ಅಭಿಯಂತರರು ರವರು ಸಂಬಂಧಿಸಿದ ಸಂಚಾರಿ ವಿಜಯನಗರ ಸಂಚಾರಿ ಠಾಣೆಗೆ ಮಾತನಾಡಿ, ತುರ್ತಾಗಿ ಮೇಲೆ ತಿಳಿಸಿರುವ ಪ್ರದೇಶದಲ್ಲಿ ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಕೋರಲಾಗಿದೆ.

9. 20ನೇ ಅಡ್ಡ ರಸ್ತೆಯಲ್ಲಿ ಹೊಸದಾಗಿ 10 ವಿದ್ಯುತ್ ಕಂಬಗಳನ್ನು ಬದಲಾವಣೆ ಮಾಡುವಂತೆ ಸಂಬಂಧಿಸಿದ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಪೂರ್ಣಪ್ರಮಾಣದಲ್ಲಿ ಚರ್ಚೆ ಮಾಡಿ ತುರ್ತಾಗಿ ಕ್ರಮ ವಹಿಸಲು ಸೂಚಿಸಲಾಗಿದೆ.

10. ವಾರ್ಡ್ ನಂ. 107ರ ಮೋಟಪ್ಪ ಉದ್ಯಾನವನದಲ್ಲಿ ಒಣಗಿರುವ ಮರಗಳನ್ನು ತುರ್ತಾಗಿ ಕತ್ತರಿಸಿ, ಉಧ್ಯಾನವನದಲ್ಲಿ ದುರಸ್ಥಿಗೆ ಬಂದಿರುವ ಜಿಮ್ ಐಟಂಗಳನ್ನು ತುರ್ತಾಗಿ ದುರಸ್ಥಿಗೆ ಒಳಪಡಿಸಿ ಉಧ್ಯಾನವನದಲ್ಲಿ ದಿನನಿತ್ಯ ವಾಯು ವಿಹಾರಕ್ಕೆ ಬರುವ ಜನ ಸಾಮಾನ್ಯರು ಸರಳತೆಯಿಂದ ಬಯ ಬೀತಿ ಇಲ್ಲದೆ ವಾಯು ವಿಹಾರವನ್ನು ಪಡೆಯುವ ಸಲುವಾಗಿ ಪಾದಚಾರಿ ಮಾರ್ಗದಲ್ಲಿ ಸಂಚರಿಸುತ್ತಾ ಹಾಗೂ ಯಂತ್ರೋಪಕರಣಗಳಲ್ಲಿ ವ್ಯಾಯಾಮ ಮಾಡಲು ಅನುವು ಮಾಡಿಕೊಡಬೇಕಾಗಿ ಸಂಬಂಧಿಸಿದ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯವರಿಗೆ ಸಭೆಯಲ್ಲಿ ಒಕ್ಕಲರಿಂದ ಸಭೆಯಲ್ಲಿ ತಿಳಿಸಲಾಯಿತು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

4/4/2022

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner